ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ.:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01:2021-22 ದಿನಾಂಕ:07ನೇ ಡಿಸೆಂಬರ್ 2021

## : ಸುತ್ತೋಲೆ :

ವಿಷಯ: ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣವನ್ನು ಕರ್ನಾಟಕ ಶಿಕ್ಷಣ ಕಾಯ್ದೆ-1983 ಮತ್ತು ಆರ್.ಟಿ.ಇ ನಿಯಮ-2012ರ ಅಡಿಯಲ್ಲಿ ಆನ್‌ಲೈನ್‌ನಲ್ಲಿ ಅನುಮೋದಿಸಲು ಸಹಾಯವಾಗುವಂತೆ ತಂತ್ರಾಂಶ ಬಿಡುಗಡೆ ಮಾಡಿದ ಬಗ್ಗೆ.

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ-1983. ಸೆಕ್ಷನ್-36

2] ಕರ್ನಾಟಕ ಶಿಕ್ಷಣ ಕಾಯ್ದೆ [ಖಾಸಗಿ ಶಾಲೆಗಳ ನೊಂದಣಿ ಮತ್ತು ನಿಯಂತ್ರಣ] ನಿಯಮ-1999 ಸರ್ಕಾರದ ಅಧಿಸೂಚನೆ ಸಂ:ಇಡಿ:137:ವಿವಿಧ:98, ದಿ:19.05.1999

3] ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯ್ದೆ-2009.

4] ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ನಿಯಮಗಳು-2012.

5] ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ[ಸಿವಿಲ್] ಸಂಖ್ಯೆ:483/2004ರ ತೀರ್ಪು ದಿನಾಂಕ:13.04.2009.

6] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:369:ಪಿಜಿಸಿ:2014, ದಿನಾಂಕ:11.11.2014.

7] ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂ.ವ್ಯ.ಶಾ.ಇ.21.ಶಾಸನ.2017, ದಿ:22.04.2017 ಕರ್ನಾಟಕ ಶಿಕ್ಷಣ ಕಾಯ್ದೆ- [2ನೇ ಕಾಯ್ದೆಗಳ ತಿದ್ದುಪಡಿ]

8] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:709:ಪಿಜಿಸಿ:2017, ದಿನಾಂಕ:08.03.2018 [ಅಧಿಸೂಚನೆ-1] ಮತ್ತು ದಿನಾಂಕ:07.03.2018 [ಅಧಿಸೂಚನೆ-2 ಮತ್ತು 3]

9] ಸರ್ಕಾರದ ಆದೇಶ ಸಂಖ್ಯೆ:ಇಡಿ:587:ಪಿಜಿಸಿ:2018, ದಿನಾಂಕ:19.11.2018

10] ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[2]ಪ್ರಾಶಿಅ.ಮಾನ್ಯತೆ ಷರತ್ತು:23:2018-19, ದಿನಾಂಕ:30.11.2018.

11] ಈ ಕಛೇರಿ ಜ್ಞಾಪನಾ ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01:2021-22, ದಿನಾಂಕ:04.08.2021.

12] ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:30.11.2021 [02.12.2021]

13) ಸರ್ಕಾರ ಪತ್ರ ಸಂಖ್ಯೆ:ಇಡಿ.92.ಪಿಜಿಸಿ.2020, ದಿನಾಂಕ:2-3-2021

14) ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7(2)ಪ್ರಾಶಿಅ.ಡೈಸ್ ವಿಲೀನ.6/2020-21, ದಿನಾಂಕ:15-3-2021

ಞ ಞ ಞ ಞ ಞ

ಮೇಲಿನ ವಿಷಯ ಹಾಗೂ ಉಲ್ಲೇಖಿದ ಪತ್ರಗಳಂತೆ ಖಾಸಗಿ ಅನುದಾನಿತ / ಅನುದಾನ ರಹಿತ ಶಾಲೆಗಳಲ್ಲಿ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದ ಪ್ರಾಧಿಕಾರಿಗಳು ಸಂಬಂಧಿಸಿದ ಶಾಲೆಗಳ ಮಾನ್ಯತೆ ನವೀಕರಣ ನೀಡಬೇಕಿರುತ್ತದೆ. ಉಲ್ಲೇಖ [11]ರಲ್ಲಿ ಖಾಸಗಿ ಶಾಲೆಗಳು ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣವನ್ನು ಇಲಾಖೆಯು ಪರಿಷ್ಕರಿಸಿ ತಂತ್ರಾಂಶದ ಮೂಲಕವೇ ನವೀಕರಿಸಲು ತಿಳಿಸಿ ಜ್ಞಾಪನವನ್ನು ನೀಡಲಾಗಿತ್ತು. ಅದರಂತೆ, ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಬಿಡುಗಡೆಗೊಳಿಸಲಾಗಿದೆ. ಆಡಳಿತ ಮಂಡಳಿಗಳಿಂದ ಭೌತಿಕ ದಾಖಲೆಗಳನ್ನು ಸ್ವೀಕರಿಸುವುದನ್ನು ನಿರ್ಬಂಧಿಸಿದೆ. ಉಳಿದಂತೆ ಉಲ್ಲೇಖ [12]ರ ಸುತ್ತೋಲೆಯಲ್ಲಿ ನೀಡಿರುವ ಮಾರ್ಗದರ್ಶನದಂತೆ ಆನ್‌ಲೈನ್ ಮೂಲಕ ಮಾನ್ಯತೆ ನವೀಕರಿಸಲು ತಿಳಿಸಲಾಗಿರುತ್ತದೆ.

ಈ ಸಂಬಂಧ ಉಪನಿರ್ದೇಶಕರು [ಆಡಳಿತ] ಮತ್ತು ಆಡಳಿತ ಮಂಡಳಿಯವರು ಹಾಗೂ ಖಾಸಗಿ ಶಾಲೆಗಳ ಮುಖ್ಯಶಿಕ್ಷಕರುಗಳು ದೂರವಾಣಿ ಮೂಲಕ ಮಾನ್ಯತೆ ನವೀಕರಣ ಸಂಸ್ಕರಣಾ ಶುಲ್ಕವನ್ನು ಕೆ-2 ಚಲನ್

ಮೂಲಕ ಪಾವತಿಸುವಂತೆ ಸೂಚಿಸಿದ್ದು, ಸದರಿ ಸುತ್ತೋಲೆಯಲ್ಲಿ ಯಾವ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೋರಿರುತ್ತಾರೆ.

ಆನ್‌ಲೈನ್‌ನಲ್ಲಿ ಪ್ರಥಮ ಮಾನ್ಯತೆ / ಮಾನ್ಯತೆ ನವೀಕರಣಕ್ಕೆ ನಿಗದಿತ ಸಂಸ್ಕರಣಾ ಶುಲ್ಕವನ್ನು ***ಲೆಕ್ಕ ಶೀರ್ಷಿಕೆ:0202-01-102-3-01 [ಮೇನೇಜ್‌ಮೆಂಟ್ ಶುಲ್ಕಗಳು]*** ಈ ಲೆಕ್ಕ ಶೀರ್ಷಿಕೆಗೆ ಕೆ-2 ಮುಖಾಂತರ ಪಾವತಿಸಿ, ಸದರಿ ಚಲನ್ ಪ್ರತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿದೆ.

**ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಯವರೆಗೆ ಒಂದೇ ಆವರಣದಲ್ಲಿ ಒಂದೇ ಆಡಳಿತ ಮಂಡಳಿಯಿಂದ ನಡೆಯುತ್ತಿರುವ ಶಾಲೆಗಳನ್ನು ಸೆಕ್ಷನ್-6(ಎ)ನಂತೆ ವಿಲೀನಗೊಳಿಸಿ ಒಂದೇ ನೋಂದಣಿ ಪ್ರಮಾಣ ಪತ್ರ ನೀಡಲು ಸಹ ಈ ಕಛೇರಿಯಿಂದ ಉಲ್ಲೇಖ(14)ರಲ್ಲಿ ಆದೇಶ ನೀಡಲಾಗಿರುತ್ತದೆ.**

ಅದರಂತೆ 01 ರಿಂದ 10ನೇ ತರಗತಿಯವರೆಗೆ ಎಷ್ಟೇ ನೋಂದಣಿ ಪ್ರಮಾಣ ಪತ್ರ ಪಡೆದಿದ್ದರೂ ಅವುಗಳನ್ನು ವಿಲೀನಗೊಳಿಸಿ ಒಂದೇ ನೋಂದಣಿ ಪ್ರಮಾಣ ಪತ್ರ ಪಡೆದು ಒಂದೇ ಡೈಸ್ ಕೋಡ್ ಪಡೆಯುವುದು.

ಈ ರೀತಿ ಒಂದೇ ಡೈಸ್ ಕೋಡ್ ಪಡೆದ ನಂತರ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣಕ್ಕಾಗಿ ಕೆಳಗೆ ಸೂಚಿಸಿರುವಂತೆ ಸಂಸ್ಕರಣಾ ಶುಲ್ಕವನ್ನು ಪಾವತಿಸುವುದು.

| ಕ್ರಮ ಸಂಖ್ಯೆ | ಶಾಲೆಯ ವರ್ಗೀಕರಣ | ಸಂಸ್ಕರಣಾ ಶುಲ್ಕ ರೂಗಳಲ್ಲಿ |
|---|---|---|
| 1 | ಪೂರ್ವ ಪ್ರಾಥಮಿಕ ಶಾಲೆಗಳು ಮಾತ್ರ | 2000 |
| 2 | ಪ್ರಾಥಮಿಕ ಶಾಲೆ 1 ರಿಂದ 5/ 1 ರಿಂದ 8/ 6 ರಿಂದ 8 | 5000 |
| 3 | ಪ್ರೌಢ ಶಾಲೆ 01 ರಿಂದ 10/ 9 ರಿಂದ 10 | 10000 |

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ]
ಸಾರ್ವಜನಿಕ ಶಿಕ್ಷಣ ಇಲಾಖೆ.

*ಇವರಿಗೆ:*

*01.* ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

*02.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]

**ಪ್ರತಿಗಳನ್ನು:-**

*03.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.

*04.* ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

*05.* ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

*06.* ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.

*07.* ಕಛೇರಿ ಪ್ರತಿ.